Kerala Gazette No. 31 dated  4th August 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಐ) ಇಲಾಖೆ

## ಅಧಿಸೂಚನೆ

ನಂಬ್ರ 5931/ಲೆಗ್. ಐ2/2018/ಕಾನೂನು. *ತಿರುವನಂತಪುರಂ,* *2018 ಮಾರ್ಚ್ 31,* *1193 ಮೀನ 17/* *1940 ಚೈತ್ರ 10.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರುಮಾಡಿದಂತಹ ಮಸೂದೆಗೆ 2018 ಮಾರ್ಚ್ 31ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 9ನೇ ಅಧಿನಿಯಮ

## 2018ರ ಕೇರಳ ವಿಧಾನಸಭಾ ಸದಸ್ಯರಿಗೆ ಪಿಂಚಣಿ ಸಂದಾಯ (ತಿದ್ದುಪಡಿ) ಅಧಿನಿಯಮ

1976ರ ಕೇರಳ ವಿಧಾನಸಭಾ ಸದಸ್ಯರಿಗೆ ಪಿಂಚಣಿ ಸಂದಾಯ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1976ರ ಕೇರಳ ವಿಧಾನಸಭಾ ಸದಸ್ಯರಿಗೆ ಪಿಂಚಣಿ ಸಂದಾಯ ಅಧಿನಿಯಮವನ್ನು ಇನ್ನು ಮುಂದಿನ ಉದ್ದೇಶಗಳಿಗಾಗಿ ಮತ್ತೂ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

1. ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಕೇರಳ ವಿಧಾನಸಭಾ ಸದಸ್ಯರಿಗೆ ಪಿಂಚಣಿ ಸಂದಾಯ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು 2018ರ ಏಪ್ರಿಲ್ 1ನೇ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ವಿಭಾಗ 2ಬಿಯ ತಿದ್ದುಪಡಿ.—1976ರ ಕೇರಳ ವಿಧಾನಸಭಾ ಸದಸ್ಯರಿಗೆ ಪಿಂಚಣಿ ಸಂದಾಯ ಅಧಿನಿಯಮದ (1976ರ 46) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ ವಿಭಾಗ 2ಬಿಯ (1)ನೇ ಉಪ-ವಿಭಾಗದಲ್ಲಿ, "ಇಪ್ಪತ್ತನಾಲ್ಕು ಸಾವಿರ ರೂಪಾಯಿಗಳು" ಎಂಬ ಪದಗಳ ಜಾಗದಲ್ಲಿ "ಎಪ್ಪತ್ತೈದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಬದಲಿಯಾಗಿ ಸೇರಿಸತಕ್ಕದ್ದು.

3. ಅನುಸೂಚಿಯ ತಿದ್ದುಪಡಿ.—ಪ್ರಧಾನ ಅಧಿನಿಯಮದಲ್ಲಿ, ಅಸ್ತಿತ್ವದಲ್ಲಿರುವ ಅನುಸೂಚಿ ಹಾಗೂ ಷರತ್ತುಗಳ ಜಾಗದಲ್ಲಿ ಈ ಕೆಳಗಿನ ಅನುಸೂಚಿಯನ್ನು ಹಾಗೂ ಷರತ್ತುಗಳನ್ನು ಬದಲಿಯಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"ಅನುಸೂಚಿ

[2(1)ನೇ ವಿಭಾಗವನ್ನು ನೋಡಿರಿ]

ಪಿಂಚಣಿ ದರ

| ಕಾಲಾವಧಿ | ಪ್ರತಿ ತಿಂಗಳಿಗೆ ಪಿಂಚಣಿ ದರ (₹) |
|---|---|
| ಎರಡು ವರ್ಷಗಳಿಗಿಂತ ಕಡಿಮೆಯಿರುವ ಯಾವುದೇ ಕಾಲಾವಧಿಗೆ | 8,000 |
| ಒಟ್ಟು ಎರಡು ವರ್ಷಗಳಿಗೆ | 8,000 |
| ಒಟ್ಟು ಮೂರು ವರ್ಷಗಳಿಗೆ | 12,000 |
| ಒಟ್ಟು ನಾಲ್ಕು ವರ್ಷಗಳಿಗೆ | 16,000 |
| ಒಟ್ಟು ಐದು ವರ್ಷಗಳಿಗೆ | 20,000 |

ಆದರೆ ಯಾವುದೇ ವ್ಯಕ್ತಿಯು, 2ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ಹೇಳಿರುವ ಪ್ರಕಾರ ಐದು ವರ್ಷಗಳಿಗಿಂತ ಹೆಚ್ಚು ಕಾಲಾವಧಿಗೆ ಒಬ್ಬ ಸದಸ್ಯನಾಗಿ ಸೇವೆ ಸಲ್ಲಿಸಿದ್ದಲ್ಲಿ ಐದು ವರ್ಷಗಳಿಗಿಂತ ಹೆಚ್ಚಿನ ಪ್ರತಿಯೊಂದು ವರ್ಷಕ್ಕೂ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿಗಳಂತೆ ಅಧಿಕ ಪಿಂಚಣಿಯನ್ನು ಆತನಿಗೆ ನೀಡತಕ್ಕದ್ದು:

ಮತ್ತೂ, ಪಿಂಚಣಿಗೆ ಅರ್ಹವಾದ ಒಟ್ಟು ಕಾಲಾವಧಿಯನ್ನು ಲೆಕ್ಕಹಾಕುವಾಗ ಅರ್ಧ ವರ್ಷವನ್ನು ಹಾಗೂ ಅದಕ್ಕಿಂತ ಹೆಚ್ಚಿನ ಕಾಲಾವಧಿಯನ್ನು ಮುಂದಿನ ಪೂರ್ಣ ವರ್ಷವಾಗಿ ಲೆಕ್ಕಹಾಕತಕ್ಕದ್ದು:

ಮತ್ತೂ ಅಲ್ಲದೆ, ಮಾಜಿ ಸದಸ್ಯನಿಗೆ ಪ್ರಾಯ ಎಪ್ಪತ್ತು ವರ್ಷ ಪೂರ್ತಿಯಾದಾಗ ಮೂರು ಸಾವಿರ ರೂಪಾಯಿಗಳನ್ನು ಹಾಗೂ ಪ್ರಾಯ ಎಂಭತ್ತು ವರ್ಷ ಪೂರ್ತಿಯಾದಾಗ ಮೂರು ಸಾವಿರದ ಐನೂರು ರೂಪಾಯಿಗಳನ್ನು ಪ್ರತಿ ತಿಂಗಳು ಹೆಚ್ಚುವರಿ ಪಿಂಚಣಿಯಾಗಿ ನೀಡತಕ್ಕದ್ದು:

ಮತ್ತೂ ಅಲ್ಲದೆ, ಈ ಅಧಿನಿಯಮದ ಪ್ರಕಾರ ಒಬ್ಬ ಸದಸ್ಯನಿಗೆ ಅರ್ಹವಾದ ಗರಿಷ್ಟ ಪಿಂಚಣಿಯು ಪ್ರತಿ ತಿಂಗಳು ಒಟ್ಟು ಐವತ್ತು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.".

---